# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ. ಕುಮಾರಸ್ವಾಮಿ, ಕಾರ್ಯದರ್ಶಿ, ಹೊನ್ನವಳ್ಳಿ ಗ್ರಾಮ ಪಂಚಾಯಿತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ D.O.No. Compt/UPLOK/BD/2125/2013/ARLO-2, ದಿನಾಂಕ: 18/22.02.2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 28/30.01.2017 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

1. ಶ್ರೀ. ಮಂಜುನಾಥ್, ತಂದೆ ಎಂ. ಗಂಗಪ್ಪ, ಹೊನ್ನವಳ್ಳಿ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ತಮ್ಮ ದೂರಿನಲ್ಲಿ ಶ್ರೀ. ಬಸವಯ್ಯ, ಪಿ.ಡಿ.ಓ (2) ಶ್ರೀ. ಕುಮಾರಸ್ವಾಮಿ, ಕಾರ್ಯದರ್ಶಿ, ಹಾಗೂ (3) ಶ್ರೀ. ಪಾಂಡುರಂಗನಾಯಕ್, ಬಿಲ್ ಕಲೆಕ್ಟರ್, ಹೊನ್ನವಳ್ಳಿ ಗ್ರಾಮ ಪಂಚಾಯಿತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. ದೂರಿನ ಸಂಕ್ಷಿಪ್ತ ವಿವರಣೆ:–

ದೂರುದಾರರು ತಮ್ಮ ದೂರಿನಲ್ಲಿ ತಿಪಟೂರು ತಾಲ್ಲೂಕು ಹೊನ್ನವಳ್ಳಿ ಗ್ರಾಮದ ಖಾತೆ ನಂ. 726 ಹೌಸ್ ಲಿಸ್ಟ್ ನಂ. 1157 ಇದು, ದೂರುದಾರರ ತಂದೆ ಎಂ.ಗಂಗಪ್ಪ ಅವರ ಹೆಸರಿನಲ್ಲಿರುತ್ತದೆ. ಇದನ್ನು ಇವರು ಕ್ರಯಮಾಡಿಕೊಂಡಿರುತ್ತಾರೆ. ಆದರೆ ಎದುರುದಾರರು ಗ್ರಾಮ ಪಂಚಾಯತಿ ಖಾತೆ 726/1 ಹೌಸ್ ಲಿಸ್ಟ್ ನಂ. 1157 ರ ಈ ಮೇಲ್ಕಂಡ ಖಾತೆಯನ್ನು ಮಹಲಿಂಗಪ್ಪ ತಂದೆ ಮಲ್ಲೇಗೌಡರ ಹೆಸರಿಗೆ ಬದಲಾಯಿಸಿರುತ್ತಾರೆ. ಇದನ್ನು ತಿದ್ದುಪಡಿಮಾಡಿ ದೂರುದಾರರ ತಂದೆ. ಎಂ. ಗಂಗಪ್ಪ ಅವರ ಹೆಸರಿನಲ್ಲಿ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದರೂ ಸಹಾ ಎದುರುದಾರರು ಕ್ರಮಕೈಗೊಂಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾನು ದಿ: 28.08.2012 ರಂದು ಈ ಪಂಚಾಯತಿಯ ಹುದ್ದೆ ವಹಿಸಿಕೊಂಡಿದ್ದು, ಅದಕ್ಕೂ ಪೂರ್ವದಲ್ಲಿಯೇ ಖಾತೆ ಬದಲಾವಣೆಯಾಗಿರುವುದು ಕಂಡುಬರುತ್ತದೆ. ಆದ್ದರಿಂದ ತನ್ನನ್ನು ಸದರಿ ಪ್ರಕರಣದಿಂದ ಕೈಬಿಡಬೇಕೆಂದು ಕೇಳಿಕೊಂಡಿದ್ದಾರೆ.

2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರ ತಂದೆ ಎಂ. ಗಂಗಪ್ಪ ಅವರೇ ಖುದ್ದಾಗಿ ತನ್ನ ಸಹೋದರ ಹೆಚ್. ಎಂ. ಮಹಲಿಂಗಪ್ಪನವರೊಂದಿಗೆ ಬಂದು ಆತನ ಹೆಸರಿನಲ್ಲಿ

ಖಾತೆ ಬದಲಾವಣೆ ಮಾಡುವಂತೆ ಮೌಖಿಕವಾಗಿ ಹೇಳಿರುವುದರಿಂದ ಖಾತೆ ಬದಲಾವಣೆ ಮಾಡಲಾಗಿರುತ್ತದೆ. ಆನಂತರ ಈ ಸಹೋದರ ನಡುವೆ ಬಿನ್ನಾಭಿಪ್ರಾಯ ಉಂಟಾಗಿ ಈ ಸುಳ್ಳು ದೂರು ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿದ್ದಾರೆ.

3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಖಾತೆ ಬದಲಾವಣೆ ಮಾಡುವ ಅಧಿಕಾರ ತನಗೆ ಇರುವುದಿಲ್ಲ. ಆದ್ದರಿಂದ ತನ್ನನ್ನು ಪ್ರಕರಣದಿಂದ ಮುಕ್ತಗೊಳಿಸಬೇಕೆಂದು ಕೋರಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳು, ಮತ್ತು ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಆಸ್ತಿ ನಂ. 726 ಹೌಸ್ ಲಿಸ್ಟ್ ನಂ. 1157 ಇದು ಮೂಲತಃ ದೂರುದಾರರ ತಂದೆ ಎಂ. ಗಂಗಪ್ಪ ಅವರು ಕ್ರಯದ ಮೂಲಕ ಪಡೆದುಕೊಂಡು ತಮ್ಮ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಿಕೊಂಡ ಬಗ್ಗೆ ದಾಖಲೆ ಲಭ್ಯವಿರುತ್ತದೆ. ಆದರೆ 2ನೇ ಎದುರುದಾರರ ಸೇವಾ ಅವಧಿಯಲ್ಲಿ ಎಂ.ಗಂಗಪ್ಪ ಅವರಿಂದ ಎಂ. ಮಹಲಿಂಗಪ್ಪ ಅವರಿಗೆ ಇದರಲ್ಲಿ 726/1 ಹೌಸ್ ಲಿಸ್ಟ್ ನಂ. 1157/2 ಎಂದು ಖಾತೆ ಬದಲಾವಣೆ ಮಡಿದ ದಾಖಲೆ ಕಂಡುಬರುತ್ತದೆ. ಆದರೆ ಈ ರೀತಿ ಖಾತೆ ಬದಲಾವಣೆ ಮಾಡಲು ಎಂ. ಗಂಗಪ್ಪ ಅವರು ಯಾವುದೇ ಅರ್ಜಿಯಾಗಲೀ ಅಥವಾ ದಾಖಲೆಯಾಗಲೀ ಸಲ್ಲಿಸಿರುವುದಿಲ್ಲ.

6. 2ನೇ ಎದುರುದಾರರ ಪ್ರಕಾರ ಎಂ. ಗಂಗಪ್ಪ ಅವರೇ ಮೌಖಿಕವಾಗಿ ಹೇಳಿದ ಮೇರೆಗೆ ತಾನುಖಾತೆ ಬದಲಾವಣೆ ಮಾಡಿದ್ದಾಗಿ ಆಕ್ಷೇಪಣೆಯಲ್ಲಿ ತಿಳಿಸಿದ್ದಾರೆ. ಕಾನೂನು ಪ್ರಕಾರ ಯಾವುದೇ ಒಂದು ಹಕ್ಕುಬದಲಾವಣೆ ಮಾಡಬೇಕಾದರೆ ಅದಕ್ಕೆ ಆ ಆಸ್ತಿಯಮಾಲೀಕರಿಂದ ಲಿಖಿತವಾದ ದಾಖಲೆ ಬೇಕಾಗುತ್ತದೆ. ಒಂದು ವೇಳೆ ಲಿಖಿತವಾದ ಯಾವುದೇ ದಾಖಲೆ ನೀಡದಿದ್ದಲ್ಲಿ ಆಗ ಖಾತೆ ಬದಲಾವಣೆ ಮಾಡಿದರೆ ಅದು ಕಾನೂನುಬಾಹಿರಾಗುತ್ತದೆ. ಈ ಪ್ರಕರಣದಲ್ಲಿ ಸಹ 2ನೇ ಎದುರುದಾರರು ಹೇಳುತ್ತಿರುವಂತೆ ಎಂ. ಗಂಗಪ್ಪ ಅವರ ಮೌಖಿಕ ಆದೇಶದ ಮೇಲೆ ಖಾತೆ ಬದಲಾವಣೆ ಮಾಡಿದ್ದು, ಅವರ ಕರ್ತವ್ಯಲೋಪವೆನಿಸುತ್ತದೆ.

7. 1ನೇ ಎದುರುದಾರರು ಈ ಖಾತೆ ಬದಲಾವಣೆ ವೇಳೆಯಲ್ಲಿ ಅವರು ಅಲ್ಲಿ ಕೆಲಸ ನಿರ್ವಹಿಸದ ಕಾರಣ ಅವರನ್ನು ಪ್ರಕರಣದಿಂದ ಕೈಬಿಡುವುದು ಸೂಕ್ತವೆನಿಸುತ್ತದೆ. 3ನೇ ಎದುರುದಾರರು ಬಿಲ್ ಕಲೆಕ್ಟರ್ ಆಗಿರುವುದರಿಂದ ಅವರ ವ್ಯಾಪ್ತಿಗೆ ಖಾತೆ ಬದಲಾವಣೆ ಬರುವುದಿಲ್ಲ. ಆದ್ದರಿಂದ ಅವರನ್ನು ಪ್ರಕರಣದಿಂದ ಕೈಬಿಡುವುದು ಸೂಕ್ತವೆನಿಸುತ್ತದೆ.

8. ಈ ಎಲ್ಲಾ ಅಂಶಗಳನ್ನೂ ಪರಿಶೀಲಿಸಿದಾಗ 2ನೇ ಎದುರುದಾರರು ಯಾವುದೇ ಲಿಖಿತ ಅರ್ಜಿ ಅಥವಾ ದಾಖಲೆ ಇಲ್ಲದೆ ಖಾತೆ ಬದಲಾವಣೆ ಮಾಡಿ ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ. ಕುಮಾರಸ್ವಾಮಿ, ಕಾರ್ಯದರ್ಶಿ, ಹೊನ್ನವಳ್ಳಿ ಗ್ರಾಮ ಪಂಚಾಯಿತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ, ಇವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ ನಿಯಮ 3(1)ರ ಅಡಿಯಲ್ಲಿ ದರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ,

ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14 (ಎ) ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/186/ಗ್ರಾಪಂಕಾ/2017 ಬೆಂಗಳೂರು, ದಿನಾಂಕ-03-04-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ. ಕುಮಾರಸ್ವಾಮಿ, ಕಾರ್ಯದರ್ಶಿ, ಹೊನ್ನವಳ್ಳಿ ಗ್ರಾಮ ಪಂಚಾಯಿತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳು ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ 1 ರಿಂದ 30 ರವರೆಗಿನ ಮೂಲ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.
6. ಶ್ರೀ. ಕುಮಾರಸ್ವಾಮಿ, ಕಾರ್ಯದರ್ಶಿ, ಹೊನ್ನವಳ್ಳಿ ಗ್ರಾಮ ಪಂಚಾಯಿತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.
7. ಗಣಕಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.